Form No.4 (Civil)
Deposition Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 3/2017

ಪ್ರಾ.ಸಾ. 2 ಚಾ.ಸಾ 2

| | | |
|---|---|---|
| ಹೆಸರು | : | ಕಾಶಪ್ಪ |
| ತಂದೆಯ ಹೆಸರು | : | ಸಾಯಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಗಾರೆ ಕೆಲಸ |
| ವಾಸ | : | ಚಪೇಟ್ಲಾ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 06-11-2025
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ಚಾಸಾ-3 ಮತ್ತು 6 ರವರ ಪರಿಚಯ ಇರುತ್ತದೆ. ದಿಃ 06.06.2016 ರಂದು ಬೆಳಿಗ್ಗೆ 8.15 ಗಂಟೆಗೆ ನಮ್ಮೂರ ಬಸ ನಿಲ್ದಾಣದ ಹತ್ತಿರ ಪಂಚನಾಮೆಯನ್ನು ಮಾಡಿರುತ್ತಾರೆ. ಚಾಸಾ-1 ಮತ್ತು ಅಣ್ಣ ತಮ್ಮಂದಿರ ನಡುವೆ ಜಗಳ ಆಗಿರುತ್ತದೆ ಎಂದು ಎರಡು ಬಡಿಗೆ ಮತ್ತು ಒಂದು ದ್ವಿಚಕ್ರ ವಾಹನವನ್ನು ಅಮನತ್ತು ಪಡಿಸಿಕೊಂಡು ನನ್ನ ಸಮಕ್ಷಮ ಪಂಚನಾಮೆ ಮಾಡಿರತ್ತಾರೆ. ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು **ನಿ.ಪಿ.4** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.4(ಎ)** ಎಂದು ಗುರುತಿಸಲಾಯಿತು. ಎರಡು ಬಡಿಗೆಗಳನ್ನು ತೋರಿಸಿಸಲಾಗಿದ್ದು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ.1 ಮತ್ತು 2 ಎಂದು ಈಗಾಗಲೇ ಗುರುತಿಸಲಾಗಿದೆ. ದ್ವಿಚಕ್ರ ವಾಹನದ ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿ.ಪಿ.2 ಮತ್ತು 3 ಎಂದು ಗುರುತಿಸಲಾಗಿದೆ.

2. ಅದು ಆದ ಮೇಲೆ ಪೊಲೀಸ ಠಾಣೆಗೆ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ನಿಮ್ಮೂರಲ್ಲಿ ಜಗಳವಾಗಿರುತ್ತದೆ ಎಂದು ಠಾಣೆಯಲ್ಲಿ ಜಪ್ತಿ ಪಡಿಸಿಕೊಂಡು, ಆ ಜಪ್ತಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು

**ನಿ.ಪಿ.5** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.5(ಎ)** ಎಂದು ಗುರುತಿಸಲಾಯಿತು. ಎಪಿ-22-ಯು-3484 ರ ವಾಹನ ಜಪ್ತಿ ಪಂಚನಾಮೆ ಮಾಡಿರುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಜಿ.ಬಿ. ಆರ್. ವಕೀಲರಿಂದ</u>

3. ದಿಃ 06.06.2016 ರಂದು ನಾನು ಮತ್ತು ಚಾಸಾ-3 ರವರ ಚಹಾ ಕುಡಿಯುತ್ತಿದ್ದಾಗ ಗುರುಮಠಕಲ್ ಪೊಲೀಸ ಪೇದೆ ಕರೆದಿರುತ್ತಾನೆ. ಅವರು ಪಂಚನಾಮೆ ಮಾಡಿದ್ದರು ನಂತರ ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ. ಏನೇನು ಬರೆದಿರುತ್ತಾರೆ ಎನ್ನುವುದಕ್ಕೆ ಸಾಕ್ಷಿದಾರರು ಬಡಿಗೆ, ಗಾಡಿ ಇತ್ತು ಅದನ್ನು ನೋಡಿರುತ್ತೇನೆ ಎಂದು ಪಂಚನಾಮೆ ಮಾಡಿರುತ್ತಾರೆ. ನಿ.ಪಿ.4 ನ್ನು ಪೊಲೀಸ ಪೇದೆ ಸದರಿ ಸ್ಥಳದಲ್ಲಿ ಬರೆದಿರುತ್ತಾನೆ. ಇಬ್ಬರು ಮೂವರು ಪೊಲೀಸರು ಇದ್ದರು. ನಿ.ಪಿ.4 ನ್ನು ಬರೆಯುವ ಕಾಲಕ್ಕೆ ಊರಿನವರು ಇದ್ದರು. ಗುನ್ನೆ ಸ್ಥಳವನ್ನು ಯಾರು ತೋರಿಸಿದರು ಎಂದು ನನಗೆ ಗೊತ್ತಿರುವುದಿಲ್ಲ. ದ್ವಿಚಕ್ರ ವಾಹನಕ್ಕೆ ಏನೇನು ಚಕಮ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಮುದ್ದೆ ಮಾಲು 1 ಮತ್ತು 2 ರಂತಹ ಬಡಿಗೆಗಳು ಒಕ್ಕಲುತನ ಮಾಡುವವರ ಮನೆಯಲ್ಲಿ ಇರುತ್ತದೆ ಎಂದರೆ ಸರಿ. ದ್ವಿಚಕ್ರ ವಾಹನದ ಹೈಡಲೇಟ ಹೊಡೆದಿದ್ದು ಮತ್ತು ಅದರ ತುಣುಕುಗಳು ಬಿದ್ದ ಬಗ್ಗೆ ನಾನು ಗಮನಿಸಿರುವುದಿಲ್ಲ. ಜೀಪನ್ನು ಪೊಲೀಸ ಠಾಣೆಗೆ ಯಾರು ತಂದು ನಿಲ್ಲಿಸಿದರು ಎಂದು ನನಗೆ ಗೊತ್ತಿರುವುದಿಲ್ಲ. ಆ ಜೀಪಿಗೆ ಏನೇನು ಜಕ್ಕಮ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರು ನನ್ನನ್ನು ಪೊಲೀಸ ಠಾಣೆಗೆ ಕರೆಯಿಸಿದರು. ಪೊಲೀಸರು ಕರೆದಿರುತ್ತಾರೆ. ನಿ.ಪಿ.5 ನ್ನು ಬರೆದಿತ್ತು ಬರೆದಂತಹ ಅದರ ಮೇಲೆ ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದರೆ ಸರಿ. ನನಗೆ ಚಾಸಾ-1 ಗೆಳೆಯನಾಗಿದ್ದು ಈ ಕೇಸಿನ ಬಗ್ಗೆ ಏನು ಗೊತ್ತಿಲ್ಲದಿದ್ದರು ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-1 ಮತ್ತು ಪೊಲೀಸರು ಸೇರಿ ಆರೋಪಿತರ ಮೇಲೆ ಸುಳ್ಳು ಕೇಸು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ನನಗೆ ಏನು ಗೊತ್ತಿಲ್ಲದಿದ್ದರು ಸಹ ಈ ರೀತಿ ಯಾಗಿ ಸಾಕ್ಷಿ ಹೇಳಬೇಕೆಂದು ಹೇಳಿದ್ದರಿಂದ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.